ಸಿ.ಸಿ. ಸಂಃ 328/2021 ಪಿ.ಡಬ್ಲ್ಯು: 02
ಸಿ.ಡಬ್ಲ್ಯು: 02

ದಿಃ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ. ಜಿ.ಆರ್. ಆರೋಪಿ ಪರ ವಕೀಲರಿಂದಃ</u>

ಮೃತ ಹೇಮಂತ್ ಕುಮಾರ್ ಧಫನಾ ಮಧ್ಯಾಹ್ನದ ದಿಃ 27.10.2020 ರಂದು ನಡೆಯಿತು. ಮೃತ ಹೇಮಂತ್ ಕುಮಾರ್ ರವರನ್ನು ಗೌರಿಬಿದನೂರು ಆಸ್ಪತ್ರೆಗೆ ದಾಖಲಿಸಲಾಯಿತು. ತದನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ನಡೆದ ಅದೇ ದಿನ ಹೇಮಂತ್ ಕುಮಾರ್ ರವರು ಹೋಗುವ ದಾರಿಯಲ್ಲೇ ಮೃತಪಟ್ಟಿರುತ್ತಾರೆ. ಧಫನಾ ಕಾರ್ಯ ಮುಗಿಯುವವರೆಗೂ ನಾನು ಅಲ್ಲೇ ಇದೆ. ಶ್ರೀರಾಮನಹಳ್ಳಿಯಲ್ಲಿ ಧಫನಾ ಕಾರ್ಯ ನಡೆಯಿತು. ನಿಪಿ-11 ರಲ್ಲಿ ಘಟನಾ ಸ್ಥಳದಲ್ಲಿ ಬೆಳಿಗ್ಗೆ 7.30 ಗಂಟೆಗೆ ಸಹಿ ಮಾಡಿರುತ್ತೇನೆ. ಅಪಘಾತ ನಡೆದ ಮರು ದಿನ ನಿಪಿ-11 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ಹೇಳಿಕೆಯ ಮೇರೆಗೆ ನಿಪಿ-11 ಅನ್ನು ಬರೆದಿರುತ್ತಾರೆ. ನಿಪಿ-11 ರಲ್ಲಿ ಬರೆದಿರುವ ಚಕ್ಕೆಬಂದಿ ನೆನಪಿಲ್ಲ. ನಿಪಿ-11 ರಲ್ಲಿ ನಮೂದಾಗಿರುವ ವಾಹನಗಳ ಸಂಖ್ಯೆ ಈಗ ನೆನಪಿಲ್ಲ. ಪೋಲಿಸರು ಘಟನಾ ಸ್ಥಳದಲ್ಲಿ ನಿಪಿ-11 ಅನ್ನು ಬರೆದಿಲ್ಲ ನಾನು ಅದರಲ್ಲಿ ಸಹಿ ಮಾಡಿಲ್ಲ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲವೆಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು